**ಸಾಕ್ಷಿಗೆ ದಿನಾಂಕ 10.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ವಕೀಲರಿಂದಃ**

1. ನನಗೆ ಈಗ 30 ವರ್ಷ. ನಾನು ಮನೆ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಹೋಸಕೋಟೆ ತಾಲ್ಲೂಕು ದೇವಲಾಪುರದಲ್ಲಿ ವಾಸವಿರುತ್ತೇನೆ. ಅರ್ಜಿದಾರ 2 ರಿಂದ 5 ರವರೆಗೆ ನನ್ನ ಮಕ್ಕಳು. ಅವರು ಬೆಂಗಳೂರಿನ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಎದುರುದಾರ 3 ಮತ್ತು 4 ರವರು ಮಾವ ಅತ್ತೆಯಾಗುತ್ತಾರೆ. ಎದುರುದಾರ 3 ಮತ್ತು 4 ರವರು ಊರಿನಲ್ಲಿ ವಾಸವಿರುತ್ತಾರೆ. ಬಸವರಾಜ್ ಅಲಿಯಾಸ್ ಬಜ್ರಂತಿ ಬಸವರಾಜ್ ಎರಡು ಹೆಸರುಗಳು ನನ್ನ ಮೃತ ಪತಿಗೆ ಸಂಭಂಧಿಸಿದೆ. ಅಪಘಾತವನ್ನು ನಾನು ನೋಡಿರುವುದಿಲ್ಲ. ನನ್ನ ಪತಿಯ ಶವವನ್ನು ಬಿಜಾಪುರದಲ್ಲಿ ಮನೆಗೆ ತಂದಾಗ ಅಪಘಾತದ ಬಗ್ಗೆ ತಿಳಿದಿರುತ್ತದೆ. ಅಪಘಾತದ ದಿನ ನನ್ನ ಪತಿಯು ಬೆಂಗಳೂರಿನಿಂದ ನಾಗಪುರಕ್ಕೆ ಲಾರಿಯನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ತೆಲಂಗಾಣ ರಾಜ್ಯದ ರಾಮಯ್ಯನಪೇಟೆ ರಸ್ತೆ ಮೇಲೆ ನಿಂತಿದ್ದ ಲಾರಿಗೆ ಡಿಕ್ಕಿಪಡಿಸಿದಾಗ ಬೆಂಕಿ ಹತ್ತಿ ಸಾವನ್ನಪ್ಪಿರುತ್ತಾರೆ. ಅಪಘಾತದ ಕುರಿತು ದೂರನ್ನು ನಾನು ನೀಡಿರುವುದಿಲ್ಲ. ಲಾರಿಯ ಮಾಲೀಕ ದೂರನ್ನು ನೀಡಿರುತ್ತಾರೆ. ನಾನು ಪೊಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ಪತಿ 1 ನೇ ಎದುರುದಾರರ ಲಾರಿಯ ಮೇಲೆ ಖಾಯಂ ಚಾಲಕ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಲಿಖಿತ ದಾಖಲೆ ಇರುವುದಿಲ್ಲ ಆದರೆ ಖಾಯಂ ಚಾಲಕನಾಗಿರುತ್ತಾರೆ. ಕಂಟೈನರ್ ಲಾರಿ ಚಲಾಯಿಸಲು ಚಾಲನಾ ಪರವಾನಗಿ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ತಿಂಗಳಿಗೆ ರೂ.25 ಸಾವಿರ ಮತ್ತು ದಿನಕ್ಕೆ 200 ರೂ ಭತ್ಯೆ ನೀಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣಾಪ್ರಮಾಣಪತ್ರದ 3 ನೇ

ಖಂಡಿಕೆಯಲ್ಲಿ ನಮೂದು ಮಾಡಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. 1 ನೇ ಎದುರುದಾರರ ಕಂಪನಿಯಿಂದ ನಮಗೆ ಯಾವುದೇ ಪರಿಹಾರ ಬಂದಿರುವುದಿಲ್ಲ. ಪೊಲೀಸರು ನನ್ನ ಪತಿಯ ಮೇಲೆ ದೋಷರೋಪಣಾಪಟ್ಟಿ ಸಲ್ಲಿಸಿರುವುದಕ್ಕೆ ನನಗೆ ಗೊತ್ತಿಲ್ಲ. ಪೊಲೀಸರು ಕಚ್ಚಾನಕಾಶೆ ತಯಾರಿಸುವುದನ್ನು ತಂದು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಿಪಿ 4 ರ ಪ್ರಕಾರ ನನ್ನ ಪತಿ ಹೋಗುತ್ತಿದ್ದ ಲಾರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಶವ ಸಂಸ್ಕಾರಕ್ಕೆ ರೂ.50 ಸಾವಿರ ಖರ್ಚು ಮಾಡಿರತ್ತೇನೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶಾಮಿಲಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ನೀಡಿದವರು ಸಹ ಅಪಘಾತ ನೋಡಿದಿರುವುದಿಲ್ಲ ಎಂದರೆ ಸರಿ. ಅಪಘಾತ ನೋಡಿದವರನ್ನು ನ್ಯಾಯಾಲಯದ ಮುಂದೆ ಸಾಕ್ಷಿದಾರರನಾಗಿ ಮಾಡಿಸಲು ಸಾಧ್ಯವಿಲ್ಲ ಕಾರಣ ಅವರು ಯಾರ ಎಂದು ನನಗೆ ಗೊತ್ತಿಲ್ಲ. 2 ನೇ ಎದುರುದಾರರು ಪರಿಹಾರ ನೀಡಲು ಭಾದ್ಯಸ್ದರಲ್ಲ ಮತ್ತು 1 ನೇ ಎದುರುದಾರರು ಮಾತ್ರ ಪರಿಹಾರ ನೀಡಲು ಭಾಧ್ಯಸ್ದರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ 1 ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ವಾಟೀ-ಸವಾಲುಃ 3 ಮತ್ತು 4 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು ಗೈರಹಾಜರಿರುತ್ತಾರೆ ಆದ್ದರಿಂದ ವಾಟೀ-ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**